**ದಿನಾಂಕಃ 20.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ಮೃತ ಮುನಿವೆಂಕಟಪ್ಪ ರವರಿಗೆ ವಿವಾಹ ಆಗಿರಲಿಲ್ಲ. ಸದರಿ ವಿಚಾರವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಂಜುನಾಥ್ ಮತ್ತು ಚಂದ್ರಶೇಖರ್ ಎಂಬುವವರು ನನಗೆ ಮತ್ತು ಮೃತ ಮುನಿವೆಂಕಟಪ್ಪ ರವರಿಗೆ ಸಂಬಂಧಿ. ನಿಪಿ 2 ರ ಪುಟ ಸಂಖ್ಯೆ 33 ರಲ್ಲಿ ಮಂಜುನಾಥ್ ರವರು ಮೃತ ಮುನಿವೆಂಕಟಪ್ಪ ರವರ ಮಗ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಅದು ತಪ್ಪಾಗಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 2 ರ ಪುಟ ಸಂಖ್ಯೆ 35 ರಲ್ಲಿ ಚಂದ್ರಶೇಖರ್ ರವರು ಮೃತ ಮುನಿವೆಂಕಟಪ್ಪ ರವರ ಮಗ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಅದು ತಪ್ಪಾಗಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 2 ರ ಪುಟ ಸಂಖ್ಯೆ 37 ರಲ್ಲಿ ಇರುವ ಸಹಿ ನನ್ನದು. ಸಾಕ್ಷಿಯು ಒಪ್ಪಿ ದ ಸಹಿಯನ್ನು **ನಿಪಿ 2(ಎ)** ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯಲ್ಲಿ ನಾನು ಮೃತ ಮುನಿವೆಂಕಟಪ್ಪ ರವರ ಮಗ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಅವರು ನನ್ನ ಚಿಕ್ಕಪ್ಪ ಆದ ಕಾರಣ ಆ ರೀತಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರು ಮುನಿಯಪ್ಪ ಎಂದರೆ ಸರಿ. ನಿಪಿ 17 ರಲ್ಲಿ ಅದೇ ರೀತಿ ನಮೂದು ಇದೆ ಎಂದರೆ ಸರಿ. ನಿಪಿ 2 ರ ಪುಟ ಸಂಖ್ಯೆ 41 ರಲ್ಲಿ ನಾನು ಮೃತ ಮುನಿವೆಂಕಟಪ್ಪ ರವರ ಮಗ ಎಂದು ನಮೂದು ಇದೆ ಎಂದರೆ ಸಾಕ್ಷಿಯುನನ್ನ ಚಿಕ್ಕಪ್ಪ ಆದ ಕಾರಣ ಆ ರೀತಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮುರುಳಿ ಎಂಬುವವರು ನನ್ನ ದೂರದ ಸಂಬಂಧಿ. ನಿಪಿ 2 ರ ಪುಟ ಸಂಖ್ಯೆ 53 ರಲ್ಲಿ ಮುರಳಿ ರವರು ಮೃತ ಮುನಿವೆಂಕಟಪ್ಪ ರವರ ಸಹೋದರ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಅವರು ದೂರದ ಸಂಬಂಧಿ ಆಗಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 2 ರ ಪುಟ ಸಂಖ್ಯೆ 87 ರಲ್ಲಿ ವಿನಯ್ ರವರು ಮೃತ ಮುನಿವೆಂಕಟಪ್ಪ ರವರ ಮಗ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಅವರು ಸಂಬಂಧಿಯಾಗಿದ್ದು, ಮಗ ಎಂದು ತಪ್ಪಾಗಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 2 ರ ಪುಟ ಸಂಖ್ಯೆ 135 ರಲ್ಲಿ ರಾಜಮ್ಮ ರವರು ಮೃತ ಮುನಿವೆಂಕಟಪ್ಪ ರವರ ಹೆಂಡತಿ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಅವರಿಗೂ,

ಮುನಿವೆಂಕಟಪ್ಪರವರಿಗೂ ಯಾವುದೇ ಸಂಬಂಧ ಇಲ್ಲ, ತಪ್ಪಾಗಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ಖಾತೆ ಮತ್ತು ಮೃತ ಮುನಿವೆಂಕಟಪ್ಪ ರವರ ಖಾತೆಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ. ವೈದ್ಯಕೀಯ ವೆಚ್ಚಗಳನ್ನು ನನ್ನ ಸಂಬಂಧಿಗಳು ಮತ್ತು ನಾನು ಪಾವತಿಸಿರುತ್ತೇನೆ. ವೈದ್ಯಕೀಯ ವೆಚ್ಚಗಳನ್ನು ನಗದು ಮೂಲಕ ಮತ್ತು ಆರ್.ಟಿ.ಜಿ.ಎಸ್ ಮೂಲಕ ಪಾವತಿಸಲಾಗಿದೆ. ಆರ್.ಟಿ.ಜಿ.ಎಸ್ ಮೂಲಕ ಪಾವತಿಯಾದ ಹಣ ನನ್ನ ಖಾತೆಯಿಂದ ವರ್ಗಾವಣೆಯಾಗಿರುತ್ತದೆ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಾನು ಮೃತ ಮುನಿವೆಂಕಟಪ್ಪ ರವರ ಮೇಲೆ ಅವಲಂಬಿತನಾಗಿದ್ದೆ. ನನಗೆ ಈಗ 40 ವರ್ಷ ವಯಸ್ಸು. ಮುನಿವೆಂಕಟಪ್ಪ ರವರಿಗೆ ಮೃತಪಡುವ ಕಾಲಕ್ಕೆ 73ಕ್ಕಿಂತ ಹೆಚ್ಚಿ ನ ವಯಸ್ಸು ಆಗಿತ್ತು. ನಾನು ಹಣಕಾಸಿಗೆ ಸಂಬಂಧಪಟ್ಟಂತೆ ಮೃತ ಮುನಿವೆಂಕಟಪ್ಪ ರವರ ಮೇಲೆ ಅವಲಂಬಿತನಾಗಿದ್ದೆ. ಮೃತ ಮುನಿವೆಂಕಟಪ್ಪ ಮತ್ತು ನನ್ನ ತಂದೆ ಅಣ್ಣ ತಮ್ಮಂದಿರಾಗಿದ್ದು, ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಮತ್ತು ಹಾಜರುಪಡಿಸಲು ತೊಂದರೆ ಇಲ್ಲ. ಮೃತ ಮುನಿವೆಂಕಟಪ್ಪ ಮತ್ತು ನಾನು ಒಟ್ಟಾಗಿ ಇದ್ದ ಬಗ್ಗೆ ಕೆಲವು ಫೋಟೋಗಳು ಇದ್ದು, ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**